C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಸಂಖ್ಯೆಃ113/2022**

ಪ್ರಾಸಾ. 04 ಚಾಸಾ. 04

| | |
|---|---|
| ಸಾಕ್ಷಿದಾರರ ಹೆಸರು | ಮಹದೇವ |
| ತಂದೆಯ ಹೆಸರು | ಕೆಂಪೇಗೌಡ |
| ವಯಸ್ಸು | 55 ವರ್ಷಗಳು |
| ಉದ್ಯೋಗ | ಕೂಲಿ ಕೆಲಸ |
| ವಾಸ | ದ್ಯಾವಪಟ್ಟಣ ಗ್ರಾಮ |

**ಸಾಕ್ಷಿಯನ್ನು ದಿನಾಂಕಃ17.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ರಿಂದ 3 ಗೊತ್ತು. ಚಾಸಾ-1 ರವರ ಮಗಳಾದ ಸಂಧ್ಯಾ ರವರ ಮದುವೆ 1ನೇ ಆರೋಪಿಯೊಂದಿಗೆ ಆಗಿತ್ತು. ಸಂಧ್ಯಾ ನೀರಿನ ಕೊಳಕ್ಕೆ ಅಂದರೆ ರಾಮಸ್ವಾಮಿ ಕಾಲುವೆಗೆ ಬಿದ್ದು ತೀರಿಕೊಂಡಿರುತ್ತಾರೆ. ಆಗ ನಾನು ನೋಡಲು ಹೋಗಿದ್ದೆ. ಚಾಸಾ-1 ರವರ ಮಗಳಾದ ಸಂಧ್ಯಾ ಸಾಯುವ ಎರಡು ದಿನಗಳ ಪೂರ್ವದಲ್ಲಿ ಅವರ ತಂದೆಯ ಮನೆಯಲ್ಲಿ ನೋಡಿದ್ದೆ. ಅದನ್ನು ಬಿಟ್ಟು ಪುನಃ ಆಕೆಯ ಶವವನ್ನು ನೋಡಿರುತ್ತೇನೆ. ಅವರು ಕೊನೆಯ ಬಾರಿ ಯಾರ ಜೊತೆ ಹೋಗಿದ್ದರು, ಎಲ್ಲಿ ಹೋಗಿದ್ದರು ಎಂದು ನಾನು ನೋಡಿರುವುದಿಲ್ಲ. ಶವ ನೋಡಲು ಹೋದಾಗ ಪೊಲೀಸರು ಆಕೆಯ ಶವ ನೀರಿನಲ್ಲಿ ಸಿಕ್ಕಿದ್ದ ಬಗ್ಗೆ ಹೇಳಿಕೆ ಪಡೆದುಕೊಂಡರು. ಇದನ್ನು ಬಿಟ್ಟರೆ ಬೇರೆ ಯಾವುದೇ ವಿಚಾರ ನನಗೆ ಗೊತ್ತಿರುವುದಿಲ್ಲ. ನಾನು ಆಕೆ ಸಾಯುವ ಪೂರ್ವದಲ್ಲಿ 1ನೇ ಆರೋಪಿ ಜೊತೆ ನೋಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕಃ**16.11.2021** ರಂದು ನಾನು ಸ್ವಂತ ಕೆಲಸದ ಮೇರೆಗೆ ಮುಟ್ಟೇನಹಳ್ಳಿ ಗ್ರಾಮಕ್ಕೆ ಹೋಗಿ ಮಧ್ಯಾಹ್ನ ಸುಮಾರು **12.40** ಗಂಟೆ ಸಮಯದಲ್ಲಿ ನಾನು ಮುಟ್ಟೇನಹಳ್ಳಿ ಗಾಮದ ಸರ್ಕಲ್ ಬಳಿ ಇದ್ದಾಗ ಚಾಸಾ-**1** ಶ್ರೀಕಂಠಸ್ವಾಮಿ ಮಗಳು ತನ್ನ ಗಂಡನ ಜೊತೆ ಆಕ್ಟಿವಾ ಹೋಂಡಾ ಸ್ಕೂಟರಿನಲ್ಲಿ ಸರಗೂರು ಹ್ಯಾಂಡ್ ಪೋಸ್ಟ್ ಕಡೆ ರಸ್ತೆಯಿಂದ ಬಂದು ಮಳವಳ್ಳಿ ಕಡೆಗೆ ತಿರುಗಿಕೊಂಡು ಹೊಗಿದ್ದನ್ನು ನಾನು ಕಣ್ಣಾರೆ ನೋಡಿರುತ್ತೇನೆ ಎಂದರೆ ಸರಿಯಲ್ಲ.

**2.** ಆ ಸಂದರ್ಭದಲ್ಲಿ ಸಂಧ್ಯಾ ಕೆಂಪು ಬಣ್ಣದ ಟಾಪ್, ಹಸಿರು ಬಣ್ಣದ ಲಗೀನ್ಸ್ ಪ್ಯಾಂಟ್ ಹಾಕಿದ್ದಳು ಎನ್ನುವ ಬಗ್ಗೆಯೂ ಸಹ ಗಮನಿಸಿರುತ್ತೇನೆ ಎಂದರೆ ಸರಿಯಲ್ಲ. ಆದರೆ ಆರೋಪಿ ಹಾಕಿದಂತಹ ಬಟ್ಟೆ ಹಾಗೂ ಸ್ಕೂಟರ್ ನಂಬರ್ ಗಮನಿಸಲಿಲ್ಲ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**3.** ನಾನು ಪೊಲೀಸರ ಮುಂದೆ ಕೊನೆಯ ಬಾರಿ ಸಂಧ್ಯಾ ರವರಿಗೆ **1** ನೇ ಆರೋಪಿ ಜೊತೆ ದಿಃ**16.11.2021** ರಂದು ಮಧ್ಯಾಹ್ನ **12.45** ಗಂಟೆ ಸಮಯದಲ್ಲಿ ನೋಡಿದ್ದ ಬಗ್ಗೆ ಈಗ ಓದಿ ಹೇಳಿದ ಪ್ರಕಾರ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿಪಿ-**12** ಎಂದು ಗುರುತಿಸಲಾಯಿತು. ಆ ರೀತಿ ಕೊನೆಯ ಬಾರಿ ಸಂಧ್ಯಾ **1** ನೇ ಆರೋಪಿ ಜೊತೆ ಹೋಗುತ್ತಿರುವುದನ್ನು ನೋಡಿದ್ದರೂ ಸಹ ಈ ಪ್ರಕರಣದ ಬಗ್ಗೆ ತಿಳಿದುಕೊಂಡಿದ್ದರೂ ಸಹ ಪೊಲೀಸರ ಮುಂದೆ ನಿಪಿ-**12** ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರು ನಮ್ಮ ಊರಿನವರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಬಿ.ಆರ್. ವಕೀಲರಿಂದಃ</u>

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.